(33ನೇ ಪುಟದಿಂದ)

# ಬಸವಣ್ಣನ ಸ್ಮೃತಿಯ ಉಳವಿ ಚೆನ್ನಬಸವೇಶ್ವರ ದೇವಸ್ಥಾನ

## ■ ಚಂದ್ರಕಾಂತ ಬೆಲ್ಲದ

ಸಮಗ್ರ ಮಾನವ ಕಲ್ಯಾಣಕ್ಕಾಗಿ 12ನೇ ಶತಮಾನದಲ್ಲಿ ಬಸವಣ್ಣ ಮಾಡಿದ ಕ್ರಾಂತಿ ತಿಳಿದದ್ದೇ. ಚಾತುರ್ವರ್ಣದವರಿಂದ ದುಡಿಯುವ ಶ್ರಮಿಕವರ್ಗದವರ ಮೇಲಾಗುತ್ತಿದ್ದ ದೌರ್ಜನ್ಯವನ್ನು ಅಳಿಸಿಹಾಕಲು ಮಹಾಕ್ರಾಂತಿಯನ್ನೇ ನಡೆಸಿದರು. ಬಿಜ್ಜಳನ ಆಸ್ಥಾನದಲ್ಲಿ ಪ್ರಧಾನಮಂತ್ರಿಯಾಗಿದ್ದ ಬಸವಣ್ಣನವರು ಅಲ್ಲಮಪ್ರಭುಗಳ ಅಧ್ಯಕ್ಷತೆಯಲ್ಲಿ ಅನುಭಾವ ಮಂಟಪದಲ್ಲಿ ವಚನ ಸಾಹಿತ್ಯಗಳನ್ನು ರಚಿಸಿದರು. ಮಧುವರಸನ ಮಗ ಮತ್ತು ಹರಳಯ್ಯನ ಮಗಳ ವಿವಾಹ ಆಯೋಜಿಸಿದ್ದರಿಂದ ಉಂಟಾದ ಕ್ರಾಂತಿ ಎಲ್ಲೆಡೆ ವ್ಯಾಪಿಸಿತು.

ಚಾತುರ್ವರ್ಣದವರು ಚಳವಳಿ ಕಟ್ಟಿದವರನ್ನು ಕೊಲ್ಲಲು ಮುಂದಾದರು. ಈ ಸಂದರ್ಭದಲ್ಲಿ ಬಸವಣ್ಣನವರು ಕೂಡಲಸಂಗಮದಲ್ಲಿ ಐಕ್ಯರಾದರೆ, ನಾಗಲಾಂಬಿಕೆ ತಂಗಡಿಯಲ್ಲಿ ಐಕ್ಯರಾದರು. ಬಸವಣ್ಣನವರ ಅಳಿಯ ಚೆನ್ನಬಸವ ಅವರು ವಚನಗಳನ್ನು ಕಟ್ಟಿಕೊಂಡು ಉತ್ತರ ಕನ್ನಡದ ಕಡೆ ಹೊರಟರು. ಈ ಸಂದರ್ಭದಲ್ಲಿ ಧಾರವಾಡದಲ್ಲಿ ಅವರು ತಂಗಿದ್ದರು. ಅವರು ತಂಗಿದ್ದ ಸ್ಥಳದಲ್ಲೇ ಉಳವಿ ಚೆನ್ನಬಸವೇಶ್ವರ ದೇವಸ್ಥಾನ ನಿರ್ಮಿಸಲಾಗಿದೆ.

ಕಲ್ಯಾಣ ಕ್ರಾಂತಿಯ ಸಂದರ್ಭದಲ್ಲಿ ಅವರು ಇಲ್ಲಿನ ಎಮ್ಮಿಕೇರಿ ಬಳಿ ಇರುವ ಎತ್ತರಿಸಿದ ಪ್ರದೇಶದಲ್ಲಿ ತಮ್ಮ ಬೆಂಬಲಿಗರೊಂದಿಗೆ ಬಂದು ಕೆಲ ದಿನ ತಂಗಿದ್ದರು. ಈ ಪ್ರದೇಶಕ್ಕೆ 'ಉಳವಿ ಚೆನ್ನಬಸವೇಶ್ವರ ಬೆಟ್ಟ' ಅಥವಾ 'ಯುಬಿ ಹಿಲ್' ಎಂದು ಕರೆಯುತ್ತಾರೆ. ದೇವಸ್ಥಾನದ ಆವರಣ, ವಿಶಾಲವಾದ ಪ್ರಾಂಗಣದಿಂದ ಅಂದಿನ ವಾಸ್ತುಶೈಲಿಯನ್ನು ಇದು ಹೊಂದಿದೆ. ಶ್ರಾವಣ ಮಾಸದಲ್ಲಿ ಇಲ್ಲಿ ನಡೆಯುವ ಜಾತ್ರೆ 'ಮಿರ್ಚಿ ಜಾತ್ರೆ' ಎಂದೇ ಪ್ರಸಿದ್ಧಿ ಪಡೆದಿದೆ.

# ಶಿಕ್ಷಣ–ಸಂಸ್ಕೃತಿ ಪ್ರಭೆಯ ಮುರುಘಾಮಠ

## ■ ವೀರಣ್ಣ ರಾಜೂರ

ಮುರುಘಾಮಠ ಧಾರವಾಡದ ಘನತೆ–ಗೌರವಗಳನ್ನು ಹೆಚ್ಚಿಸಿರುವ ಧಾರ್ಮಿಕ ಶ್ರದ್ಧಾಕೇಂದ್ರ. ಮೃತ್ಯುಂಜಯ ಅಪ್ಪಗಳ ಸಂಕಲ್ಪ ಶಕ್ತಿ ಮತ್ತು ಮಹಾಂತ ಅಪ್ಪಗಳ ಕ್ರಿಯಾಶಕ್ತಿಗಳಿಂದ ಬೆಳೆಯುತ್ತ ಬೆಳಗುತ್ತ ಬಂದ ಇದು ಇಂದು ನಾಡಿನ ವಿರಕ್ತಮಠ ಪರಂಪರೆಯಲ್ಲಿ ಒಂದು ಉನ್ನತ ಸ್ಥಾನವನ್ನು ಗಳಿಸಿಕೊಂಡು ರಾರಾಜಿಸುತ್ತಿದೆ.

ಮುರುಘರಾಜೇಂದ್ರ ಉಚಿತ ಪ್ರಸಾದ ನಿಲಯ, ಅಖಿಲಭಾರತ ಶಿವಾನುಭವ ಸಂಸ್ಥೆ, ಬಾಲಲೀಲಾ ಮಹಾಂತ ಶಿವಯೋಗೀಶ್ವರ ಗ್ರಂಥಮಾಲೆ ಮುರುಘಾಮಠದ ಮೂರು ಕಣ್ಣುಗಳು. ಅನ್ನದಾಸೋಹ, ಜ್ಞಾನದಾಸೋಹ, ಅನುಭಾವ ದಾಸೋಹ ಇಲ್ಲಿ ನಿರಂತರ ನಡೆಯುವ ತ್ರಿವಿಧ ದಾಸೋಹಗಳು. ಬಡ ವಿದ್ಯಾರ್ಥಿಗಳ ಭವಿಷ್ಯದ ಉಜ್ವಲತೆ, ಸ್ವಸ್ಥ ಸುಂದರ ಸಮಾಜದ ನಿರ್ಮಾಣ, ಶ್ರೀಮಂತ ಶರಣ ಸಾಹಿತ್ಯ–ಸಂಸ್ಕೃತಿ ಪ್ರಸಾರ ಇವು ಶ್ರೀಮಠದ ತ್ರಿವಿಧ ಮಹಾಮಣಿಹಗಳು.

ಮುರುಘಾಮಠದ ಉಚಿತ ಪ್ರಸಾದ ನಿಲಯ ಅನೇಕ ಸಾವಿರ ಬಡ ವಿದ್ಯಾರ್ಥಿಗಳ ಬಾಳಿಗೆ ಬೆಳಕನ್ನು ನೀಡಿದ ದಾರಿದೀಪ. ಪೂಜ್ಯ ಮೃತ್ಯುಂಜಯ ಅಪ್ಪಗಳ ಮಾನವೀಯ ಅಂತಃಕರಣ, ಶಿಕ್ಷಣಪ್ರೀತಿ, ವಿದ್ಯಾರ್ಥಿ ವಾತ್ಸಲ್ಯ ಕಾರಣವಾಗಿ 1917ರಲ್ಲಿ ಸ್ಥಾಪಿತವಾದ ಇದು ಈ ಭಾಗದ ಗ್ರಾಮೀಣ ಬಡ ವಿದ್ಯಾರ್ಥಿಗಳ ಆಶಾಕಿರಣವಾಗಿ, ಉಜ್ವಲ ಭವಿಷ್ಯ ರೂಪಿಸುವ ಮಹಾಮನೆಯಾಗಿ ಕಾರ್ಯಮಾಡುತ್ತ ಬಂದಿದೆ. ಕನ್ನಡನಾಡಿನ ತುಂಬ ಮಠ ಮಾನ್ಯಗಳು ಉಚಿತ ಪ್ರಸಾದನಿಲಯ ಆರಂಭಿಸಲು ಪ್ರೇರಣೆ ನೀಡಿದ ಇದು ನಾಡಿನ ಶೈಕ್ಷಣಿಕ ಪ್ರಗತಿಗೆ ನಾಂದಿ ಹಾಡಿದ ಕೀರ್ತಿಗೆ ಭಾಜನವಾಗಿದೆ. ಈ ಸಂಸ್ಥೆ ತನ್ನ ನೂರು ವರ್ಷದ ಸಾರ್ಥಕ ಸೇವೆಯನ್ನು ಪೂರೈಸಿದ ನೆನಪಿನಲ್ಲಿ 2018ರ ಆಗಸ್ಟ್ ಪೂರ್ತಿ ಒಂದು ತಿಂಗಳ ಪರ್ಯಂತರ ಶತಮಾನೋತ್ಸವವನ್ನು ಅರ್ಥಪೂರ್ಣವಾಗಿ ಆಚರಿಸಿತು.

ಶ್ರೀಮಠ ಗ್ರಂಥ ಪ್ರಕಟಣೆಯ ಕ್ಷೇತ್ರದಲ್ಲಿಯೂ ಸಕ್ರಿಯವಾಗಿದೆ. ಮೃತ್ಯುಂಜಯ ಅಪ್ಪಗಳ ಕಾಲದಿಂದಲೂ ಅನೇಕ ಮೌಲಿಕ ಕೃತಿಗಳನ್ನು ಪ್ರಕಟಿಸುತ್ತ ಬಂದ ಈ ಪರಂಪರೆಯನ್ನು ಸದ್ಯದ ಶ್ರೀಗಳಾದ ಶ್ರೀ ಮಲ್ಲಿಕಾರ್ಜುನ ಸ್ವಾಮಿಗಳು ಇನ್ನಷ್ಟು ಶ್ರೀಮಂತವಾಗಿ ಬೆಳಸಿಕೊಂಡು ನಡೆದಿದ್ದಾರೆ. ಬಸವ ಜಯಂತಿ ಶತಮಾನೋತ್ಸವ ಆಚರಣೆ ಸಂದರ್ಭದಲ್ಲಿ ಅವರು ಪ್ರಕಟಿಸಿದ 'ಜಾಗತಿಕ ಚಿಂತಕರು ಮತ್ತು ಬಸವಣ್ಣ' ಮಾಲಿಕೆಯ 25 ಗ್ರಂಥಗಳು, 'ಯುಗಯುಗದ ಉತ್ಸಾಹ' ಎಂಬ ಸಾವಿರ ಪುಟದ ಸ್ಮರಣ ಸಂಪುಟ; ಪ್ರಸಾದ ನಿಲಯದ ಶತಮಾನೋತ್ಸವ ಸಂದರ್ಭದಲ್ಲಿ ಏಕಕಾಲಕ್ಕೆ ಪ್ರಕಟಿಸಿ ಬಿಡುಗಡೆಗೊಳಿಸಿದ 112 ಶರಣ ಸಾಹಿತ್ಯಕ್ಕೆ ಸಂಬಂಧಿಸಿದ ಮೌಲಿಕ ಗ್ರಂಥಗಳು ಮತ್ತು 'ಪ್ರಸಾದ ಪ್ರಭೆ' ಎಂಬ ಬೃಹತ್ ಸ್ಮರಣ ಸಂಪುಟ ವಿರಕ್ತಮಠಗಳ ಪುಸ್ತಕ ಪ್ರಕಟಣೆಯ ಇತಿಹಾಸದಲ್ಲಿಯೇ ಎದ್ದು ಕಾಣುವಂತಹ ವಿರಳ ಘಟನೆಯಾಗಿ ದಾಖಲೆಗೊಳ್ಳುವಂತಾಗಿದೆ.

ಶ್ರೀಮಠ ಕಳೆದ 71 ವರ್ಷಗಳಿಂದ 'ಸಾವಧಾನ' ಎಂಬ ಮಾಸಿಕ ಪತ್ರಿಕೆಯನ್ನು ಹೊರಡಿಸುತ್ತ ಬಂದಿದೆ. ಶಿಕ್ಷಣ ಸಂಸ್ಥೆಗಳನ್ನು ನಡೆಸುತ್ತ ಶಿಕ್ಷಣ ಪ್ರಸಾರದಲ್ಲಿಯೂ ತನ್ನ ಮೇಲ್ಮೆಯನ್ನು ಮೆರೆದಿದೆ. ಪ್ರತಿವರ್ಷ ಶ್ರೀಮಠದಿಂದ ನಡೆಯುವ ಶಿವಯೋಗೀಶ್ವರರ ರಥೋತ್ಸವ ಸಾಹಿತ್ಯ–ಕಲೆ–ಸಂಸ್ಕೃತಿಗಳ ಸಂಗಮವೆನಿಸಿ ಜನಮನದಲ್ಲಿ ಭಕ್ತಿ, ಶ್ರದ್ಧೆ, ಸದ್ಭಾವಗಳನ್ನು ತುಂಬುತ್ತ ಬಂದಿದೆ.



# ಸವಿಸಾಟಿಯಿಲ್ಲದ ಪೇಢೆ

## ■ ಪ್ರೊ. ಈರಣ್ಣ ಶಿರಕೋಳ

ಹೀಗೊಂದು ಕಾಲವಿತ್ತು. ಧಾರವಾಡದ ಪೇಢೆಗಾಗಿ ಜನರು ಸರತಿಸಾಲಿನಲ್ಲಿ ನಿಲ್ಲುತ್ತಿದ್ದರು. ಲೈನ್ ಬಜಾರ್‌ನಲ್ಲಿರುವ 'ಠಾಕೂರ್ ಪೇಢೆ' ಪಡೆಯುವುದು ಮತ್ತು ಹಂಚುವುದೇ ದೊಡ್ಡ ವಿಷಯವಾಗಿತ್ತು. ಬೆಳಿಗ್ಗೆ 8ಕ್ಕೆ ಪೇಢೆ ನೀಡುವುದು ಆರಂಭವಾಗುತ್ತಿತ್ತು. 9 ಗಂಟೆಗೆ ಮಾರಾಟ ಮುಗಿಯುತ್ತಿತ್ತು.

ಅಂಗಡಿ ಮುಂದಿನ ಸರತಿ ಸಾಲನ್ನು ಹೊರಬಂದು ನೋಡುತ್ತಿದ್ದ ಅಂಗಡಿ ಮಾಲೀಕರು, ಜನರ ಸಂಖ್ಯೆ ನೋಡಿ ಒಬ್ಬೊಬ್ಬರಿಗೆ ಎಷ್ಟು ನೀಡಬೇಕು ಎಂಬುದನ್ನು ನಿರ್ಧರಿಸುತ್ತಿದ್ದರು. ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಫಲಿತಾಂಶ ಬಂದಾಗ ಪೇಢೆಗೆ ಬೇಡಿಕೆ ಹೆಚ್ಚು. ಧಾರವಾಡ ಪೇಢೆ ಹೆಚ್ಚು ಜನಪ್ರಿಯಗೊಳ್ಳಲು ಈ ಭಾಗದ ಎಮ್ಮೆ ನೀಡುತ್ತಿದ್ದ ಗಟ್ಟಿ ಹಾಲು ಕೂಡಾ ಕಾರಣ. ಆರಂಭದಲ್ಲಿ ಅಳ್ನಾವರದ ಸಮೀಪದ ದನಗರ ಗೌಳಿ ಬಳಿ ಇದ್ದ ಎಮ್ಮೆಗಳು ವರ್ಷದ 12 ತಿಂಗಳೂ ಕಾಡಿನ ಹಸಿರನ್ನೇ ಮೇಯುತ್ತಿದ್ದವು. ಅದರ ಹಾಲಿನಿಂದ ಪೇಢೆ ಹೆಚ್ಚು ರುಚಿಯಾಗುತ್ತಿತ್ತು.

ಈಗಲೂ ಈ ಭಾಗದಲ್ಲಿ ಹಾಲು ಉತ್ಪಾದಕರ ಸಂಖ್ಯೆ ದೊಡ್ಡದಿದೆ. ಪೇಢೆಯ ಗುಣಮಟ್ಟ ಮತ್ತು ರುಚಿಯೂ ಅದೇ ರೀತಿಯಾಗಿದೆ. ಆದರೆ ಈಗ ಸರತಿಸಾಲಿನಲ್ಲಿ ನಿಲ್ಲುವ ಪ್ರಮೇಯವಿಲ್ಲ. 'ಠಾಕೂರ್', 'ಮಿಶ್ರ', 'ಬಿಗ್ ಮಿಶ್ರ', 'ಶಂಕರ ಡೇರಿ' ಇತ್ಯಾದಿಗಳು ಈಗ ಪೇಢೆ ತಯಾರಿಸಿ ಮಾರುತ್ತಿದ್ದಾರೆ. ●